ಶ್ರೀ ಎನ್.ಎ. ಹ್ಯಾರಿಸ್:– ಇಲ್ಲಿ ಏನಾಗಿದೆ ಎಂದರೆ, ಜೈಲಿನಲ್ಲಿ ವೈದ್ಯಕೀಯ ಸೌಲಭ್ಯ ಸಾಕಾಗುತ್ತಿಲ್ಲ, ಜೈಲಿಗೆ ಹೋದವರನ್ನು ಆಚೆಗೆ ತೆಗೆದುಕೊಂಡು ಬರುವ ಕಾರ್ಯಕ್ರಮ ನಡೆಯುತ್ತಿದೆ. ದಯವಿಟ್ಟು 12,000 ಜನರಿದ್ದಾರೆಂದು ಹೇಳುತ್ತೀರಿ, ಅಲ್ಲೇ ಯಾವುದಾದರೂ ಸೌಲಭ್ಯ ಮಾಡಬೇಕು. ಏಕೆಂದರೆ, ಅಲ್ಲಿರುವವರು ಕೂಡ ಮನುಷ್ಯರೇ.

ಅಧ್ಯಕ್ಷರು:– ಇದು ಬೇರೆ ಆಗುತ್ತದೆ.

ಶ್ರೀ ಎನ್.ಎ. ಹ್ಯಾರಿಸ್:– ಮಾನ್ಯ ಅಧ್ಯಕ್ಷರೆ, ಜೈಲು ಮಂತ್ರಿಗಳಿಗೆ, ಅಲ್ಲಿ ಸ್ವಲ್ಪ ಮಾಡಿ ICU ಇವೆಲ್ಲಾ ಇಟ್ಟರೆ ಅನುಕೂಲವಾಗುತ್ತದೆಂದು ಹೇಳಿ, ಅಲ್ಲಿ ಇರುವವರನ್ನು ಚೆನ್ನಾಗಿ ನೋಡಿಕೊಳ್ಳಲಿ, ಖೈದಿಗಳು ಆಚೆಗೆ ಬರುವುದಕ್ಕಾಗುವುದಿಲ್ಲವೆನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ವಿವಿಧ ಇಲಾಖೆಗಳ ಎಸ್.ಸಿ.ಪಿ ಮತ್ತು ಎಸ್.ಟಿ.ಪಿ. ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 39

ಸದಸ್ಯರ ಹೆಸರು : ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಳವಳ್ಳಿ)

ಉತ್ತರಿಸುವ ಸಚಿವರು : ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆಗಳು:–

ಅ) ವಿವಿಧ ಇಲಾಖೆಗಳ ಎಸ್.ಸಿ.ಪಿ. ಮತ್ತು ಎಸ್.ಟಿ.ಪಿ. ಯೋಜನೆಗಳನ್ನು ಸಮರ್ಪಕವಾಗಿ ನೀಡಲಾಗಿದೆಯೇ ಎಂಬುದರ ಬಗ್ಗೆ ಇಲಾಖೆಗೆ ಇರುವ ಮಾಹಿತಿಯೇನು; (ಪೂರ್ಣ ಮಾಹಿತಿ ಒದಗಿಸುವುದು)

Whether the scheme of SCSP and TSP has been implemented in the various Departments effectively (furnish details)

ಆ) ನಿಗದಿತ ಗುರಿಯನ್ನು ಸಾಧಿಸಿದ ಇಲಾಖೆಗಳು ಯಾವವು;

Which of the Departments have achieved the fixed target?

ಇ) ಅದಕ್ಕಾಗಿ ಇಲಾಖೆ ಕೈಗೊಂಡ ಕ್ರಮಗಳೇನು?

The action taken by the Department there for.

ಉತ್ತರಗಳು:–

ಅ) 2001–12ನೇ ಸಾಲಿಗೆ ವಿವರಗಳನ್ನು ಅನುಬಂಧ–1 ಮತ್ತು 2 ರಲ್ಲಿ ನೀಡಲಾಗಿದೆ.

Details are given in Annexure-1 and 2 for the year 2011-12.

ಆ) ವರ್ಷಾಂತ್ಯದಲ್ಲಿ ಪೂರ್ಣ ಪ್ರಮಾಣದ ಪ್ರಗತಿ ವರದಿಯನ್ನು ಪಡೆದ ನಂತರ ಆಯಾ ಇಲಾಖೆಗಳು ಸಾಧಿಸಿದ ಗುರಿಯನ್ನು ಗುರುತಿಸಲು ಸಾಧ್ಯವಾಗುತ್ತದೆ.

The achievements of the Departments can be identified only after obtaining the full pledged progress report of that Department at the end of the year.

ಇ) ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ವರ್ಗಗಳ ಉಪಯೋಜನೆಯಡಿ ವಿವಿಧ ಇಲಾಖೆಗಳಿಗೆ ಯೋಜನೆಗಳ ಅನುಷ್ಠಾನಕ್ಕಾಗಿ ನಿಗದಿಪಡಿಸಲಾದ ಅನುದಾನವನ್ನು ವಿನಿಯೋಗಿಸಲಾಗಿದೆಯೇ ಎಂಬ ಬಗ್ಗೆ ಆಯಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಪ್ರತಿ ತಿಂಗಳು ಎಂಪಿಕ್ ಸಭೆಗಳಲ್ಲಿ ಪರಿಶೀಲಿಸುತ್ತಾರೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಡೆಯುವ ಅಧಿಕಾರಯುಕ್ತ ಸಮಿತಿಯಲ್ಲಿ ಈ ಕುರಿತಂತೆ ಪ್ರಗತಿ ಪರಿಶೀಲನೆ ಮಾಡಲಾಗುತ್ತದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಕೆ.ಡಿ.ಪಿ. ಸಭೆಯಲ್ಲಿ ಈ ಕುರಿತಂತೆ ಪರಿಶೀಲನೆ ಮಾಡುವುದರ ಜೊತೆಗೆ ಅನುದಾನ ಖರ್ಚು ಮಾಡಲು ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತದೆ.

The Principal Secretary to Government/ Secretaries to Government of the Departments are review the progress achieved under SCSP/TSP as to whether the grants have been properly utilized or otherwise in the monthly meetings. The Empower Committee headed by the Additional Chief Secretary to Government assisted by the Principal Secretary

to Government. Social Welfate Department also review this progress at its meetings. The Chief Secretary to Government is also reviewing the progress in the KDP meetings.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರವನ್ನೇನೋ ಒದಗಿಸಿದ್ದಾರೆ, ಆದರೆ ಈ ಒಂದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಗೋಸ್ಕರ ಪ್ರತಿಯೊಂದು ಇಲಾಖೆಯಲ್ಲಿ budget provision ಮಾಡಿಕೊಂಡಿರುವ ರೀತಿಯಲ್ಲಿ, ಆ ಇಲಾಖೆಯ ಕಾರ್ಯಕ್ಷಮತೆ, ಇವತ್ತು ಜನವರಿ ಮುಗಿದಿದೆ, ಇನ್ನೊಂದು ತಿಂಗಳಿನಲ್ಲಿ ನಾವು ಹೊಸ ಬಜೆಟ್ ಅನ್ನು ಕೊಡುತ್ತಿದ್ದೇವೆ. ಆದರೆ ಅನುಷ್ಠಾನ ವರದಿಯನ್ನು ನೀವೇ ಕೊಟ್ಟಿದ್ದೀರಿ. ಕರ್ನಾಟಕ ರಾಜ್ಯ ಜನತೆಯ ದಲಿತ ಪ್ರತಿನಿಧಿಗಳಲ್ಲಿ ನೀವೂ ಒಬ್ಬರು, ನಾವು ನಿಮ್ಮನ್ನು ಈ ಪ್ರಶ್ನೆ ಮೂಲಕ ಛೇಡಿಸುವುದಕ್ಕೆ ಹೋಗುತ್ತಿಲ್ಲ, ಆ ವರ್ಗದ ಧ್ವನಿಯಾಗಿ ಈ ಪ್ರಶ್ನೆ ಇದೆ. ಅನುಷ್ಠಾನ ಯಾವ ರೀತಿಯಲ್ಲಿದೆ ಎಂದರೆ, ನಿಗದಿಪಡಿಸಿದ ಅನುದಾನದ ಒಟ್ಟು ಮೊತ್ತ 1867 ಕೋಟಿ, ಆದರೆ 845 ಕೋಟಿ ಖರ್ಚಾಗಿರುವುದು. ವಿವಿಧ ಇಲಾಖೆಗಳ ವಿಚಾರದಲ್ಲಿ ಮಾತನಾಡುವುದಕ್ಕೆ ಹೋದರೆ, ಕೃಷಿ ಇಲಾಖೆಯಲ್ಲಿ ಕಡೆಗಣಿಸಿರತಕ್ಕಂಥದ್ದು ಕಾಣುತ್ತದೆ. ನಿಜವಾಗಿಯೂ ಕಟ್ಟ ಕಡೆಯ ವರ್ಗದ ಜನ ಕೂಲಿ ಕಾರ್ಮಿಕರು ಇರತಕ್ಕಂತಹ ವರ್ಗಕ್ಕೆ ಇವರು 131 ಕೋಟಿ ರೂ.ಗಳನ್ನು ನಿಗದಿಪಡಿಸಿದರೆ ಅವರು ಖರ್ಚು ಮಾಡಿರುವುದು 31 ಕೋಟಿ ರೂ. 100 ಕೋಟಿ ರೂ. ಬಗ್ಗೆ ಅಲ್ಲಿ ಪ್ರಸ್ತಾಪವೇ ಇಲ್ಲ. ವಿವಿಧ ಇಲಾಖೆಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ತಪ್ಪಾಗಿರತಕ್ಕಂತಹ ವಿಚಾರದಲ್ಲಿ ವಸತಿ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಭಾರಿ ನೀರಾವರಿ ಇಲಾಖೆ, ಲೋಕೋಪಯೋಗಿ ಇಲಾಖೆ, ಸಣ್ಣ ನೀರಾವರಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಕಾರ್ಮಿಕ ಇಲಾಖೆ ಹಾಗೂ ಇಂಧನ ಇಲಾಖೆಗಳು ತುಂಬಾ ನಿಕೃಷ್ಟವಾಗಿವೆ.

ಇಲಾಖೆಗಳ ವಿಚಾರವನ್ನು ಮಾತನಾಡುವುದಕ್ಕೆ ಹೋದರೆ ಸಮಯ ಸಾಕಾಗುವುದಿಲ್ಲ. ಆದರೆ ರಾಜ್ಯಪಾಲರ ವಂದನಾ ನಿರ್ಣಯದ ಸಂದರ್ಭದಲ್ಲಿ ನಾವು ಅದನ್ನು ವಿಸ್ತೃತವಾಗಿ ಚರ್ಚೆ ಮಾಡುತ್ತೇವೆ. ದಯಮಾಡಿ ನನ್ನ ಮನವಿ ಇಷ್ಟೇ. ಈ ಇಲಾಖೆಗಳ ಕಾರ್ಯಕ್ರಮಗಳ ಬಗ್ಗೆ ಮುಖ್ಯ ಕಾರ್ಯದರ್ಶಿಗಳು ಗಮನ ಹರಿಸುತ್ತಾರೆ. ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಇದರ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಯಾರ ಮೇಲಾದರೂ ಈ ವಿಚಾರವಾಗಿ ಒಂದು ಶೋಕಾಸ್ ನೋಟಿಸ್ ಆಗಲಿ, ಇದರ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ಪ್ರಕ್ರಿಯೆ ಸರ್ಕಾರದ ಮುಂದೆ ಇದೆಯೇ? ಹಾಗಿದ್ದಲ್ಲಿ ಯಾವ ಯಾವ ಇಲಾಖೆಯವರ ಮೇಲೆ ನೀವು ಆ ರೀತಿ ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಸ್ಪಷ್ಟಪಡಿಸಿ ಇನ್ನು ಮುಂದಾದರೂ ಸರಿಯಾಗಿ ಖರ್ಚಾಗುವ ಹಾಗೆ ನೋಡಿಕೊಳ್ಳಿ. ಇದು ಕೇವಲ 38% implement ಆಗಿರುವಂಥದ್ದು. ದಯಮಾಡಿ ಆ ಜನರ ಬೇಡಿಕೆ ಮತ್ತು ಅವರ ಹಕ್ಕಿಗೆ ಚ್ಯುತಿ ಆಗದ ರೀತಿಯಲ್ಲಿ ಇಲಾಖೆ ಕ್ರಮ ವಹಿಸಬೇಕು. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನೀಡಿ.

ಶ್ರೀ ಎ. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇಲಾಖೆಯ ಉತ್ತರದ ಬಗ್ಗೆ ಸನ್ಮಾನ್ಯ ಶಾಸಕರೇ ಈಗಾಗಲೇ ಎಲ್ಲಾ ವಿಚಾರಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರತಿ ತಿಂಗಳೂ ರಾಜ್ಯ ಸರ್ಕಾರ ಈ ಆಡಳಿತ ವ್ಯವಸ್ಥೆ ಅಡಿಷನಲ್ Chief Secretary ಅಧ್ಯಕ್ಷತೆಯಲ್ಲಿ Development Commissioner, ನಮ್ಮ ಇಲಾಖಾ ಪ್ರಧಾನ ಕಾರ್ಯದರ್ಶಿ ಹಾಗೂ ಈ ರಾಜ್ಯದ ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು SCP ಹಾಗೂ TSP ಬಗ್ಗೆ ಪ್ರತಿ ತಿಂಗಳು ರಿವ್ಯೂ ಮಾಡುತ್ತಾರೆ. ಅದರ ಜೊತೆಗೆ ನಮ್ಮ standing committee ನಮ್ಮ SC ಶಾಸಕರ ಅಧ್ಯಕ್ಷತೆಯಲ್ಲಿ ಇರತಕ್ಕಂತಹ ಒಂದು ಸಮಿತಿ ಪ್ರತಿ ವಾರ ಸಭೆಯನ್ನು ಮಾಡುತ್ತಿದೆ. ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳನ್ನು ಕರೆಸಿ ಯಾವ ಯಾವ ಇಲಾಖೆಯಲ್ಲಿ

ಎಷ್ಟೆಷ್ಟು ಯೋಜನೆಗಳನ್ನು ರೂಪಿಸಿದ್ದಾರೆ, ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆಯುತ್ತಾರೆ. ಎಚ್ಚರಿಕೆಯನ್ನು ಸಹ ನೀಡುತ್ತಿದ್ದಾರೆ. ಆದರೆ ಒಂದು ಮಾಹಿತಿ ಬಗ್ಗೆ ತಾವು ಇಲ್ಲಿ ತಿಳಿದುಕೊಳ್ಳಬೇಕಾಗಿದೆ. ವಿಶೇಷವಾಗಿ ಈ ರಾಜ್ಯದ ಆಡಳಿತ ವ್ಯವಸ್ಥೆ ಹಾಗೂ ಬಜೆಟ್ ಅನ್ನು ನೋಡಿದಾಗ ಹಿಂದಿನ ವರ್ಷ ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಯಡಿಯೂರಪ್ಪನವರು ಇದ್ದಾಗ ಸಮಾಜ ಕಲ್ಯಾಣ ಇಲಾಖೆಗೆ 4.633 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಅಲೋಕೇಷನ್ ಮಾಡಿದ್ದರು. ಅದರ ಜೊತೆಗೆ ಪೂಲ್ಡ್ ಅಮೌಂಟ್ SCಗೆ 700 ರೂ ST ಗೆ 300 ಒಂದು ಸಾವರ ಕೋಟಿ ರೂ. ನಮ್ಮ ಪೂಲ್ಡ್ ಅಮೌಂಟ್‌ನಲ್ಲಿ ಇಟ್ಟಿದ್ದರು. ಇಡೀ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ಹಣ ಮೀಸಲಿಟ್ಟು ಹಣ ಬಿಡುಗಡೆ ಮಾಡಿದ ಸರ್ಕಾರ ಎಂದರೆ ನಮ್ಮ ಸರ್ಕಾರ ಎನ್ನುವುದನ್ನು ರಾಜ್ಯದ ಜನತೆ ಅರಿಯಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅದರ ಜೊತೆಗೆ ನಮ್ಮ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವುದು 2699 ಕೋಟಿ ರೂ. ವೆಚ್ಚ ಮಾಡಿರುವುದು 2222 ಕೋಟಿ ರೂ. ಟೋಟಲ್ ಬಜೆಟ್ ಅಲೋಕೇಷನ್‌ಗೆ 50%, ರಿಲೀಸ್ಟ್ ಅಮೌಂಟ್‌ಗೆ ನಾವು ವೆಚ್ಚ ಮಾಡಿರುವುದು 82%. ಈ ನಿಟ್ಟಿನಲ್ಲಿ ನಮ್ಮ ಆಡಳಿತ ವ್ಯವಸ್ಥೆ ಯಾವುದೇ ಅಧಿಕಾರಿಗಳು ಹಾಗೂ ಯಾವುದೇ ಇಲಾಖೆಯವರು SCP ಮತ್ತು TSP ಬಗ್ಗೆ ನಿರ್ಲಕ್ಷ್ಯ ಮಾಡಿದ್ದರೆ ಅವರ ಮೇಲೆ FIR ಹಾಕಿದ್ದೇವೆ. ಅಧಿಕಾರಿಗಳು ಜಾಗೃತಿ ಸಮಿತಿ ಸಭೆಗೆ ಸರಿಯಾಗಿ ಬರಲಿಲ್ಲವೆಂದರೆ ಅವರ ಮೇಲೆ FIR ಹಾಕಿದ್ದೇವೆ. ಆಡಳಿತ ವ್ಯವಸ್ಥೆಯಲ್ಲಿ ಚುರುಕನ್ನು ಮುಟ್ಟಿಸುತ್ತಿದ್ದೇವೆ. ಕೆಲವು ಇಲಾಖೆಗಳು ಅಗ್ರಿಕಲ್ಚರ್ ಇಲಾಖೆಯಲ್ಲಿ ವೆಚ್ಚ ಮಾಡುವುದಕ್ಕಾಗುವುದಿಲ್ಲ. ಯೋಜನೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ 38 ಕೋಟಿ ಸರೆಂಡರ್ ಮಾಡಿದ್ದಾರೆ. 1.13 ಕೋಟಿ ರೂ. ಹಾರ್ಟಿಕಲ್ಚರ್ ನವರು ಸರೆಂಡರ್ ಮಾಡಿದ್ದಾರೆ. ಅನಿಮಲ್ ಹಸ್ಬೆಂಡರಿ ಇಲಾಖೆಯವರು ಐದು ಕೋಟಿ, ಸಾರಿಗೆ ಇಲಾಖೆ 10 ಕೋಟಿ, infrastructure 28 ಕೋಟಿ, ಎಕಾಲಜಿ

ಮತ್ತು Environment Department nearly 3 ಕೋಟಿ, Co-Operation 8 ಕೋಟಿ, IT ಮತ್ತು BT 13 ಕೋಟಿ, Commerce and Industries 7 ಕೋಟಿ, Urban Development 106 ಕೋಟಿ, ಮೆಟ್ರೋಗೆ 100 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ನಾವು ಕೊಡುವುದಕ್ಕಾಗುವುದಿಲ್ಲವೆಂದು ನಮ್ಮ ಇಲಾಖೆಯವರು ಹೇಳುತ್ತಿದ್ದಾರೆ. ಮೆಟ್ರೋಗೆ ಏಕೆ SCP ಯಲ್ಲಿ ಕೊಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಈ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಮುಜರಾಯಿ ಇಲಾಖೆಯಲ್ಲಿ ಗಂಟೆ ಹೊಡೆಯುವುದಕ್ಕೂ SCP ಯಿಂದ ದುಡ್ಡು ಕೊಡುತ್ತಿದ್ದಾರೆ. ಆದರೆ ಗಂಟೆ ಹೊಡೆಯುವ ಜಾಗಕ್ಕೆ ಅನೇಕರನ್ನು ಬಿಡುವುದಿಲ್ಲ. ಈ ವ್ಯವಸ್ಥೆ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಇತ್ತೀಚೆಗೆ ಇಡೀ ರಾಜ್ಯದ ಎಲ್ಲಾ ವಿಭಾಗಗಳಲ್ಲಿ ರಿವ್ಯೂ ಮಾಡಿದ್ದೇವೆ. ಜಿಲ್ಲೆಗಳಿಗೆ ಹೋಗಿ ರಿವ್ಯೂ ಮಾಡಿದ್ದೇವೆ. ಗ್ರಾಮ ಪಂಚಾಯಿತಿಗಳಲ್ಲಿ ಏಕೆ ಸೆಪರೇಟ್ ಅಕೌಂಟ್ ಇಲ್ಲ, SFC ಯಲ್ಲಿ ಏಕೆ ಸೆಪರೇಟ್ ಅಕೌಂಟ್ ಇಡಲಿಲ್ಲ. FIR ಹಾಕುತ್ತೇವೆ, ಸಸ್ಪೆಂಡ್ ಮಾಡುತ್ತೇವೆಂದು ಹೇಳಿ ಸಸ್ಪೆಂಡ್ ಮಾಡಿದ್ದೇವೆ. 80% ನಾವು ವೆಚ್ಚ ಮಾಡಿದ್ದೇವೆ. ಇನ್ನು ಎರಡು ತಿಂಗಳಲ್ಲಿ 99 ರಿಂದ 100% ವರೆಗೆ ವೆಚ್ಚ ಮಾಡುತ್ತೇವೆಂದು ಅಧ್ಯಕ್ಷರ ಮುಖಾಂತರ ಮಾನ್ಯ ಶಾಸಕರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನೀಡಿರುವಂತಹ ಉತ್ತರ ಸಮರ್ಪಕವಾಗಿದ್ದರೂ, ಕೆಲವೊಂದು ಮಾಹಿತಿಗಳಲ್ಲಿ ಇವರೇನು ಶೇಕಡಾವಾರು ಹೇಳಿದ್ದಾರೆ, ನಿಮ್ಮ ಮಾಹಿತಿ ಆಧಾರದ ಮೇಲೆ ನಾನು ಮಾತನಾಡುತ್ತಿದ್ದೇನೆ. ಇದು ನನ್ನ ಸ್ವಂತ ಹೇಳಿಕೆ ಅಲ್ಲ. 1867 ಕೋಟಿ ರೂ.ಗಳಲ್ಲಿ 845 ಕೋಟಿ ರೂ. ಮಾತ್ರ ಖರ್ಚಾಗಿದೆ ಎಂದು ಇವರ ಮಾಹಿತಿ. ಇವರು ಒಂದು ಕಡೆ ನಾವು 50% ಮೇಲೆ ಪ್ರೋಗ್ರೆಸ್ ತೋರಿಸಿದ್ದೇವೆಂದು ಹೇಳುತ್ತಾರೆ. ಮತ್ತೊಂದು ಕಳೆದ ಬಜೆಟ್‌ನಲ್ಲಿ ನಮಗೆ 4,000 ಕೋಟಿ ಬಜೆಟ್ ಪ್ರಾವಿಷನ್ ಇತ್ತು, ಅದರಲ್ಲಿ 2600 ಕೋಟಿ ಹಣ ನಮಗೆ ಬಿಡುಗಡೆ ಆಗಿತ್ತು. ಅದರಲ್ಲಿ 2300 ಕೋಟಿ

ನಾವು ಖರ್ಚು ಮಾಡಿದ್ದೇವೆಂದು ಹೇಳಿದರು. ಆದರೆ ಒಂದು ಬಜೆಟ್‌ನ ಗಾತ್ರ ಮಾತ್ರ ಹೇಳುತ್ತಾ ಜನರ ಮೂಗಿಗೆ ಬೆಣ್ಣೆ ಸವರುವುದು ಬೇಡ. ದಯಮಾಡಿ ಕೊಡುವಷ್ಟು ಮಾತ್ರ ಘೋಷಣೆ ಮಾಡಿ. ಜನರ ಮತಕ್ಕೋಸ್ಕರ ನಿಮ್ಮ ಯೋಜನೆಗಳು ತಯಾರಾಗುವುದು ಬೇಡ. ಸರ್ಕಾರ ನಡೆಸುವವರಲ್ಲಿ ಪ್ರಾಮಾಣಿಕತೆ ಹಾಗೂ ಜವಾಬ್ದಾರಿ ಇರಲಿ. ನೀವಾದರೂ ಆ ಇಲಾಖೆಯು ಜವಾಬ್ದಾರಿ ಹೊತ್ತವರು ನೀವೂ ಕೂಡ ಒಬ್ಬ ದಲಿತ ಮಂತ್ರಿಯಾಗಿದ್ದುಕೊಂಡು ನ್ಯಾಯ ಕೊಡುವುದಕ್ಕೆ ಹೋರಾಟ ಮಾಡುತ್ತಿದ್ದೀರಿ. ಸಾಕಷ್ಟು ಸಂದರ್ಭಗಳಲ್ಲಿ ನಮ್ಮ ಸಹಮತವನ್ನು ನಿಮಗೆ ತೋರಿಸಿದ್ದೇವೆ. ಈ ವಿಚಾರದಲ್ಲಿ ನಿರ್ದಾಕ್ಷಿಣ್ಯ ಕ್ರಮವನ್ನು ವಿವಿಧ ಇಲಾಖೆಗಳಲ್ಲಿ ಆಗುತ್ತಿರತಕ್ಕಂತಹ ತಪ್ಪಿಗೆ ನಿಮ್ಮ ದಲಿತ ಹೃದಯ ಮಿಡಿಯಲಿ ಎಂದು ಒಂದು ಸಲಹೆಯನ್ನು ನೀಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳುದರು, ನಾನು ಕೂಡ SC/ST ಕಮಿಟಿಯಲ್ಲಿ ಸದಸ್ಯನಾಗಿದ್ದೇನೆ. ಬಹುತೇಕ ಇಲಾಖೆಗಳು SC/ST ಗೆ ಎಷ್ಟು ಹಣ ನಿಗದಿ ಆಗಿತ್ತೋ ಅಷ್ಟು ಹಣವನ್ನು ಕೊಟ್ಟಿಲ್ಲ. ನಾವು ಅಧಿಕಾರಿಗಳನ್ನು ಕರೆಸಿ ಪ್ರಶ್ನೆ ಮಾಡಿದ್ದೇವೆ.

ಅಧ್ಯಕ್ಷರು:– ಉತ್ತರವನ್ನು ಹೇಳುದ್ದಾರೆ. ಎಲ್ಲಿ ತೆಗೆದುಕೊಂಡಿಲ್ಲ ಅಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮತ್ತೆ ಮತ್ತೆ ಕೇಳಿದರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, PWD ಇಲಾಖೆಯಲ್ಲಿ 9 ತಿಂಗಳುಗಳು ಕಳೆದರೂ ಇನ್ನೂ ಹಣ ರಿಲೀಸ್ ಆಗಿಲ್ಲ.

ಶ್ರೀ ಎ. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಮ್ಮ ಎಲ್ಲಾ ಶಾಸಕ ಮಿತ್ರರಿಗೆ ಒಂದು ವಿಚಾರದಲ್ಲಿ ಮನವಿ ಮಾಡುತ್ತೇನೆ. ಇವತ್ತು ಅಂಬೇಡ್ಕರ್ ಅಭಿವೃದ್ಧಿ ನಿಗಮ ಇರಬಹುದು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇರಬಹುದು, ಪರಿಶಿಷ್ಟ ವರ್ಗದ ನಿಗಮ ಇರಬಹುದು, ಇನ್ನು 40 ರಿಂದ 50 ಶಾಸಕರು ತಮ್ಮ ಫಲಾನುಭವಿಗಳ ಪಟ್ಟಿಯಲ್ಲಿ

ಕಳುಹಿಸಿ ಕೊಟ್ಟಿಲ್ಲ. ಅವರೇ ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಎಲ್ಲಾ ಶಾಸಕರಿಗೂ ಮತ್ತೊಮ್ಮೆ ಪ್ರಾರ್ಥನೆಯನ್ನು ಮಾಡುತ್ತಾ ಎಲ್ಲಾ ಶಾಸಕರು ಒಂದು ವಾರ ಅಥವಾ 15 ದಿವಸಗಳೋಳಗೆ ಫಲಾನುಭವಿಗಳ ಪಟ್ಟಿಯನ್ನು ಕಳುಹಿಸಿ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನಮ್ಮ ಸರ್ಕಾರ ಬಂದಾಗ ಇಷ್ಟೊಂದು ಕೋಟಿ ರೂ. ಕೊಟ್ಟಿದ್ದೇವೆಂದು ಹೇಳಿದರು. ಗಂಗಾ ಕಲ್ಯಾಣ ಯೋಜನೆ ಎಲ್ಲಾ ಕಡೆ ತೆಗೆದುಕೊಂಡಿದ್ದೀರಿ. ಅದಕ್ಕೆ ಸ್ವಲ್ಪ ಇಚ್ಛಾ ಶಕ್ತಿ ತೋರಿಸಿ.

ಅಧ್ಯಕ್ಷರು:– ಇದು ಪ್ರಶ್ನೋತ್ತರ. ಎಲ್ಲರೂ ಹೀಗೆ ಕೇಳುತ್ತಿದ್ದರೆ ಆಗುವುದಿಲ್ಲ. ಈ ಪ್ರಶ್ನೆಯನ್ನು ಮುಕ್ತಾಯ ಮಾಡಿದ್ದೇನೆ.

ಡಾ: ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆ ಸಚಿವರು ಅಭಿವೃದ್ಧಿ ಮಾಡಬೇಕು, ನ್ಯಾಯ ದೊರಕಿಸಿ ಕೊಡಬೇಕೆಂದು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ. ಬಜೆಟ್ ಆಗುವುದಕ್ಕೀಮತ ಮೊದಲೇ ನಮ್ಮ ಎಲ್ಲಾ ಶಾಸಕರನ್ನು ಕರೆದು ಜನಸಂಖ್ಯೆಗೆ ಅನುಗುಣವಾಗಿ ಕೇಂದ್ರದ ಯೋಜನಾ ಆಯೋಗದ ನಿರ್ದೇಶನದ ಹಿನ್ನೆಲೆಯಲ್ಲಿ ಬಜೆಟ್‌ನಲ್ಲಿ ಅವರ ಜನಸಂಖ್ಯೆಗೆ ಅನುಗುಣವಾಗಿ ಹಣ ಇಡಬೇಕು. ಇಟ್ಟಂತಹ ಹಣ ನೂರಕ್ಕೆ ನೂರು ಖರ್ಚಾಗಬೇಕೆಂದು ಹೇಳಿ ಒಂದು ಚರ್ಚೆಯನ್ನು ಮಾಡಿದರು. 4,000 ಕ್ಕೂ ಹೆಚ್ಚು ಹಣ ಕೊಟ್ಟಿದ್ದರೆ ಆ 4000 ಹಣವೂ ಖರ್ಚಾಗುವ ರೀತಿಯಲ್ಲಿ ಅವರು ಕಾರ್ಯಕ್ರಮ ಹಾಕಿಕೊಳ್ಳಬೇಕು. ಉಳಿದ ಹಣ non-lapsable grant ಆಗಬೇಕು. ಏಕೆಂದರೆ ಅಸಮಾನತೆ ಸಮಾಜವನ್ನು ಸಮಾನತೆ ಸಮಾಜದ ಕಡೆಗೆ ಕೊಂಡೊಯ್ಯದೇ ಇದ್ದರೆ ಅನೇಕ ಸಮಸ್ಯೆಗಳನ್ನು ರಾಜ್ಯ ಅಥವಾ ದೇಶ ಎದುರಿಸಬೇಕಾಗುತ್ತದೆ. ಅದಕ್ಕಾಗಿ ಅವರಿಗೆ ನಾನು ಏನು ಹೇಳುತ್ತೇನೆಂದರೆ...

ಅಧ್ಯಕ್ಷರು:– ಅದನ್ನೆಲ್ಲಾ ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಿ.

ಡಾ: ಹೆಚ್.ಸಿ. ಮಹದೇವಪ್ಪ:– What I am suggesting to this Government is, ಅವರು ಏನು ಬಜೆಟ್‌ನಲ್ಲಿ ಹಣವನ್ನು ನಿಗದಿ ಮಾಡಿದ್ದಾರೋ ಆ ಹಣವನ್ನು ನೂರಕ್ಕೆ ನೂರರಷ್ಟು ಖರ್ಚು ಮಾಡುವ ರೀತಿಯಲ್ಲಿ, ಖರ್ಚಾಗದಿದ್ದರೆ non-lapsable grant ಎಂದು ಪರಿವರ್ತನೆ ಮಾಡುವ ರೀತಿಯಲ್ಲಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು:– ಆಯಿತು. ಮಾನ್ಯ ಸಂಪಂಗಿಯವರು ತಮ್ಮ ಪ್ರಶ್ನೆ ಕೇಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು:– ನೀವು ಏನು ಹೇಳಬೇಕೆಂದಿದ್ದೀರೋ ಅದನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ. ಮಾನ್ಯ ಸಚಿವರು ಇನ್ನೂ ನಲವತ್ತು ಶಾಸಕರು ಫಲಾನುಭವಿಗಳ ಪಟ್ಟಿಯನ್ನು ಕಳುಹಿಸಿಲ್ಲವೆಂದು ಹೇಳಿರುವುದು ನಿಜವಿರಬಹುದು. ಆದರೆ ಕಳೆದ ಸಾಲಿನದ್ದಕ್ಕೆ ಸಂಬಂಧಪಟ್ಟಂತೆ ಕೊಟ್ಟಿರುವ ಫಲಾನುಭವಿಗಳಿಗೆ ನಿಗಮದಿಂದ ಇನ್ನೂ ಕೂಡ ಸಬ್ಸಿಡಿ ರಿಲೀಸ್ ಆಗಿಲ್ಲ. ಇದು ಒಂದು ವಿಷಯ. ಇನ್ನು ಎರಡನೆಯದಾಗಿ ನಿಗಮದಿಂದ ಐದಾರು ವರ್ಷಗಳ ಹಿಂದೆ ಕೊರೆದಿರತಕ್ಕಂಥ ಬೋರ್‌ವೆಲ್‌ಗಳಿಗೆ ಇನ್ನೂ ಕೂಡ ವಿದ್ಯುತ್ ಸಂಪರ್ಕವನ್ನು ಕೊಟ್ಟಿಲ್ಲ. ಐ.ಪಿ. ಸೆಟ್‌ಗಳಿಗೂ ಕೂಡಿ ವಿದ್ಯುತ್ ಸಂಪರ್ಕವನ್ನು ಕೊಟ್ಟಿಲ್ಲ.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ, ಬಂದೀಖಾನೆ ಸಚಿವರು):– ಮಾನ್ಯ ಅಧ್ಯಕ್ಷರೆ, ಸುಮಾರು 12 ಸಾವಿರ ಕೊಳವೆ ಬಾವಿಗಳಿಗೆ ನಾವು ವಿದ್ಯುತ್ ಸಂಪರ್ಕವನ್ನು ಒದಗಿಸಿದ್ದೇವೆ. ಇನ್ನೂ 14 ಸಾವಿರ ಪೆಂಡಿಂಗ್ ಇದೆ. ನಾವು ಹೆಚ್ಚು ಹೆಚ್ಚು ಬೋರ್‌ವೆಲ್ ಕೊರೆಯುವುದರಿಂದ ವಿದ್ಯುತ್ ಸಂಪರ್ಕ ಒದಗಿಸಬೇಕಾದದ್ದು ಕೂಡ ಹೆಚ್ಚಾಗುತ್ತಿದೆ. ಇವುಗಳಿಗೆ

ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ ನಾವು ಬೆಸ್ಕಾಮ್ ಮತ್ತು ಹೆಸ್ಕಾಮ್ ಸಹಕಾರದೊಂದಿಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಆಯಿತು. ಸಂಪಂಗಿಯವರೆ ನೀವು ಪ್ರಶ್ನೆ ಕೇಳಿ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ):– ಮಾನ್ಯ ಅಧ್ಯಕ್ಷರೆ, ನೀವೂ ಕೂಡ ಯಾವಾಗಲೂ ನನಗೆ ಸಂಪಂಗಿ, ಸಂಪಂಗಿ ಎಂದು ಕರೆಯುತ್ತಿರುವುದರಿಂದ ನನಗೆ ತೊಂದರೆಯಾಗುತ್ತಿದೆ. ನೀವು ನನ್ನ ಇನಿಷಿಯಲ್ ಹೇಳಿ ಅಥವಾ ಬಾಗೇಪಲ್ಲಿ ಸಂಪಂಗಿ ಎಂದು ಹೇಳಿ. ಈಗಾಗಲೇ ನಿಮಗೆ ನಾನು ಅನೇಕ ಬಾರಿ ನನ್ನ ಇನಿಷಿಯಲ್ ಪ್ರಸ್ತಾವನೆ ಮಾಡಿ ಹೇಳಿ ಎಂದು ಹೇಳಿದ್ದೇನೆ. ಏಕೆಂದರೆ ನಾವೆಷ್ಟೇ ಒಳ್ಳೆಯ ಕೆಲಸಗಳನ್ನು ಮಾಡಿದರೂ ಕೂಡ ಯಾವುದೋ ಒಂದು ಹೆಸರಿನಲ್ಲಿ ಕೆಟ್ಟ ಅಭಿಪ್ರಾಯ ಬರುವುದು ಬೇಡ. ಪರಗೋಡು ಸಂಪಂಗಿ ಎಂದು ಕರೆಯಿರಿ.

ಅಧ್ಯಕ್ಷರು:– ಆಯಿತು. ಬಾಗೇಪಲ್ಲಿಯ ಮಾನ್ಯ ಎನ್. ಸಂಪಂಗಿಯವರೆ, ಈಗ ತಮ್ಮ ಪ್ರಶ್ನೆ ಕೇಳಿ.

ವೈಯಕ್ತಿಕ ನೇರ ಸಾಲ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 325
ಸದಸ್ಯರ ಹೆಸರು : ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ)
ಉತ್ತರಿಸುವ ಸಚಿವರು : ಶ್ರೀ ಎ. ನಾರಾಣಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)

ಪ್ರಶ್ನೆಗಳು:–

ಅ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ನಿಗಮದ ವತಿಯಿಂದ ನೇರ ಸಾಲವನ್ನು ಎಷ್ಟು ಮಂದಿ ಫಲಾನುಭವಿಗಳಿಗೆ ನೀಡಲಾಗಿದೆ; ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ವಿವರ ಒದಗಿಸುವುದು.